ರೂ.೨೫,೦೦೦ಗಳನ್ನು ತುಂಬಿರುವುದು ಮತ್ತು ಭೂಮಿಯನ್ನು ನೀಡಿರುವುದಂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಆರೋಗ್ಯ ಕೇಂದ್ರಗಳ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಲು ಕಾರಣಗಳೇನು ? ಮತ್ತು ಯಾವಾಗ ಪ್ರಾರಂಭಿಸಿಲಾಗುವುದು ?

ಶ್ರೀ ಬಿ. ರಾಚಯ್ಯ(ಆರೋಗ್ಯ ಮಂತ್ರಿಗಳು).—

ಅ) ಶಿರಸಂಗಿ ಗ್ರಾಮಸ್ಥರು ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ರೂ. ೨೫,೦೦೦ಗಳನ್ನು ತೇವಣಿ ಇಟ್ಟಿದ್ದು ಆ ಎಕರೆ ಜಮೀನನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಆಸುಂಡಿ ಗ್ರಾಮಸ್ಥರು ಸಾರ್ವಜನಿಕ ವಂತಿಕೆ ಹಾಗೂ ಜಮೀನು ನೀಡಿ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇನಾಂಹೊಂಗಲ್ ಗ್ರಾಮಕ್ಕೆ ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗಿದೆ.

ಶಿರಸಂಗಿ ಮತ್ತು ಆಸುಂಡಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಜಿಲ್ಲಾ ಪರಿಷತ್ತು ಶಿಫಾರಸ್ಸು ಮಾಡಿದಲ್ಲಿ ಪರಿಶೀಲಿಸಲಾಗುವುದು. ಮಂಜೂರಾತಿ ನೀಡಿದ ನಂತರ ಕಟ್ಟಡ ಕಾಮಗಾರಿ ಪ್ರಾರಂಭವಾಗುವುದು.

ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ

೨೦೩೩. ಶ್ರೀ ವಸಂತ ವಿ. ಸಾಲಿಯಾನ(ಕಾಪು).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಬಕಾರಿ ಗುತ್ತಿಗೆದಾರರಿಂದ ಸರಕಾರಕ್ಕೆ ಬರಬೇಕಾದ ಬಾಕಿ ಹಣ ಎಷ್ಟು ?

ಆ) ಸದರಿ ಹಣವನ್ನು ವಸೂಲ್ಮಾಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಡಿ. ಬಿ. ಇನಾಂದಾರ್(ರಾಜ್ಯ ಅಬಕಾರಿ ಸಚಿವರು).—

ಅ) ೩೧-೩-೧೯೮೮ರವರೆಗೆ ೪೧.೪೩ ಕೋಟಿ ರೂಪಾಯಿಗಳಷ್ಟು ಅಬಕಾರಿ ಗುತ್ತಿಗೆದಾರರಿಂದ ಬಾಕಿ ಬರಬೇಕಾಗಿರುವುದು.

ಆ) ಒಟ್ಟು ೪೯.೪೩ ಕೋಟಿ ರೂಪಾಯಿಗಳಷ್ಟು ಬಾಕಿಯಲ್ಲಿ ೩೧.೩೪ ಕೋಟಿ ರೂಪಾಯಿಗಳಷ್ಟು ಕೋರ್ಟಿನ ತಡೆಯಾಜ್ಞೆಯಲ್ಲಿ ಇರುವುದು ಬಾಕಿ ಹಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ ಮೇರೆಗೆ ವಸೂಲ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಅಂಶಕಾಲಿಕ ತಾತ್ಕಾಲಿಕ ಕಾವಲುಗಾರರ ಬಗ್ಗೆ

೨೦೬೨. ಶ್ರೀ ವಸಂತ ವಿ. ಸಾಲಿಯಾನ(ಕಾಪು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಕರ್ನಾಟಕ ರಾಜ್ಯದ ವಿವಿಧ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಎಷ್ಟು ಜನ ಅಂಶಕಾಲಿಕ ತಾತ್ಕಾಲಿಕ ಕಾವಲುಗಾರರು ಕೆಲಸ ಮಾಡುತ್ತಿದ್ದಾರೆ.

ಅ) ಅವರು ಎಷ್ಟು ವರ್ಷದಿಂದ ಈ ಕೆಲಸವನ್ನು ಈ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅವರ ಮಾಸಿಕ ವೇತನವೆಷ್ಟು ?

ಇ) ಅವರನ್ನು ಸರ್ಕಾರ ಪೂರ್ಣಕಾಲಿಕ ಕಾವಲುಗಾರರನ್ನಾಗಿ ಸದರಿ ಕಚೇರಿಗಳಲ್ಲೇ ನೇಮಿಸಲು ಕ್ರಮ ತೆಗೆದಕೊಳ್ಳಲಾಗಿದೆಯೇ ?